# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಇತರೆ ಪರೀಕ್ಷೆಗಳು

**6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-03.**

ಸಂಖ್ಯೆ: ವೈ1(ಇ.ಪ) ಪ.ಅ.ಲ್ಯಾಮಿನೇಷನ್/19/2021-22 ದಿನಾಂಕ: 19/04/2022

## ದರಪಟ್ಟಿ ಆಹ್ವಾನ ಪತ್ರ

**ವಿಷಯ:** ಇತರೆ ಪರೀಕ್ಷೆಗಳ ವಿಭಾಗದಿಂದ ನಡೆಯುವ ಪರೀಕ್ಷೆಗಳ ಅಂಕಪಟ್ಟಿ/ಪ್ರಮಾಣ ಪತ್ರಗಳನ್ನು ಲ್ಯಾಮಿನೇಷನ್ ಮಾಡುವ ಬಗ್ಗೆ.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಇತರೆ ಪರೀಕ್ಷೆಗಳ ವಿಭಾಗದಿಂದ ನಡೆಯುವ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳ ಅಂಕಪಟ್ಟಿ ಮತ್ತು ಪ್ರಮಾಣ ಪತ್ರವನ್ನು ಲ್ಯಾಮಿನೇಷನ್ ಮಾಡಲು ಅರ್ಹ ಸಂಸ್ಥೆಗಳಿಂದ ದರಪಟ್ಟಿ ಆಹ್ವಾನಿಸಲಾಗಿದ್ದು, ಸಂಸ್ಥೆಗಳು ಸದರಿ ಕಾರ್ಯಕ್ಕೆ ತಗಲುವ ಮೊತ್ತಕ್ಕೆ ಜಿ.ಎಸ್.ಟಿ ಸೇರಿದಂತೆ ದರ ನಮೂದಿಸಿ ದರಪಟ್ಟಿಯನ್ನು ಮುಚ್ಚಿದ ಲಕೋಟೆಯಲ್ಲಿ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ದಿನಾಂಕ: 28/04/2022 ರಂದು ಸಂಜೆ 4:00 ಗಂಟೆಯೊಳಗೆ, ನಿರ್ದೇಶಕರು (ಇತರೆ ಪರೀಕ್ಷೆಗಳು), ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 03 ಈ ವಿಳಾಸಕ್ಕೆ ಮುದ್ದಾಂ/ಅಂಚೆ ಮೂಲಕ ತಲುಪಿಸಲು ತಿಳಿಸಿದೆ.

## Specification ವಿವರ ಕೆಳಕಂಡಂತಿದೆ

| Sl. No. | Description | Price (including of all taxes) |
|---|---|---|
| 01 | Two side Thermal Lamination of Marks Card/Certificates 30.5cm X 21.5cm size using 60 Micron Polyester Film | **PER 01 Marks Card** |

**ಷರತ್ತುಗಳು:**

1. ಒಂದು ಅಂಕಪಟ್ಟಿ ಮತ್ತು ಪ್ರಮಾಣ ಪತ್ರವನ್ನು ಲ್ಯಾಮಿನೇಷನ್ ಮಾಡಲು ತಗಲುವ ದರವನ್ನು ನಮೂದಿಸುವುದು.
2. ಸಂಸ್ಥೆಗಳು ಈ ಕಾರ್ಯಕ್ಕೆ ಸೂಚಿಸುವ ದರಪಟ್ಟಿಗಳನ್ನು ಒಪ್ಪುವ, ತಿರಸ್ಕರಿಸುವ ಅಧಿಕಾರ ನಿರ್ದೇಶಕರು (ಇತರೆ ಪರೀಕ್ಷೆಗಳು) ರವರದ್ದಾಗಿರುತ್ತದೆ.
3. ಅತಿ ಕಡಿಮೆ ದರ ಸೂಚಿಸಿ ಆಯ್ಕೆಯಾಗುವ ಸಂಸ್ಥೆಗೆ (ಜಿ.ಎಸ್.ಟಿ ಒಳಗೊಂಡಂತೆ) ನೀಡಲಾಗುವ ಕಾರ್ಯಾದೇಶದಲ್ಲಿ ಸೂಚಿಸುವ ದಿನಾಂಕದೊಳಗೆ ಅಂಕಪಟ್ಟಿಯನ್ನು ಲ್ಯಾಮಿನೇಷನ್ ಮಾಡಿ ಪೂರೈಸುವುದು. ವಿಳಂಬವಾದಲ್ಲಿ ದಿನಕ್ಕೆ ರೂ. 200/- ರಂತೆ ದಂಡವನ್ನು ಬಿಲ್ಲಿನ ಮೊತ್ತದಲ್ಲಿ ಕಟಾಯಿಸಲಾಗುವುದು.
4. ಸೂಚಿಸುವ ದರಗಳು ಎಲ್ಲಾ ರೀತಿಯ ತೆರಿಗೆಗಳನ್ನು ಒಳಗೊಂಡಿರಬೇಕು.
5. ದರಪಟ್ಟಿ ಸಲ್ಲಿಸುವಾಗ ಸೀಲ್ ಮಾಡಿದ ಲಕೋಟೆಗಳ ಮೇಲೆ ಕಡ್ಡಾಯವಾಗಿ **"ಅಂಕಪಟ್ಟಿ/ಪ್ರಮಾಣ ಪತ್ರವನ್ನು ಲ್ಯಾಮಿನೇಷನ್‌ಗೆ ಸಂಬಂಧಿಸಿದ ದರಪಟ್ಟಿ"** ಎಂದು ನಮೂದಿಸುವುದು.

6. ಕಾರ್ಯಾದೇಶದಲ್ಲಿ ಸೂಚಿಸಲಾಗಿರುವ ಕೆಲಸವನ್ನು ಪೂರ್ಣಗೊಳಿಸಿದ ನಂತರ ಕಾರ್ಯಾದೇಶ ಪಡೆದ ಸಂಸ್ಥೆಯು ಸಲ್ಲಿಸುವ ಬಿಲ್ಲಿನ ಮೊತ್ತದಲ್ಲಿ 2% ಟಿ.ಡಿ.ಎಸ್ ಅನ್ನು ಕಟಾಯಿಸಿ ಉಳಿಕೆ ಮೊತ್ತವನ್ನು ಚೆಕ್ ಮೂಲಕ ಪಾವತಿಸಲಾಗುವುದು.

7. ಸಾಮಗ್ರಿಗಳನ್ನು ಸರಬರಾಜು ಮಾಡಲು ಯಾವುದೇ ಮುಂಗಡ ಹಣವನ್ನು ಪಾವತಿಸಲಾಗುವುದಿಲ್ಲ.

8. ಈ ಕಾರ್ಯದ ಸಂಬಂಧ ಯಾವುದೇ ಸಾಗಾಣಿಕ ವೆಚ್ಚವನ್ನು ಮಂಡಳಿ ವತಿಯಿಂದ ಪಾವತಿಸಲಾಗುವುದಿಲ್ಲ.

9. ದರಪಟ್ಟಿ ಸಲ್ಲಿಸುವ ಸಂಸ್ಥೆಯು ನಿಯಮಾನುಸಾರ ನೋಂದಣಿಯಾಗಿದ್ದು, ಎಸ್.ಜಿ.ಎಸ್.ಟಿ ಮತ್ತು ಸಿ.ಜಿ.ಎಸ್.ಟಿ ಸಂಖ್ಯೆ ಹೊಂದಿರಬೇಕು.

10. ಇದು ಪರೀಕ್ಷಾ ಕಾರ್ಯವಾಗಿರುವುದರಿಂದ ಪರೀಕ್ಷಾ ಗೌಪ್ಯತೆಯನ್ನು ಕಾಪಾಡಿಕೊಳ್ಳುವುದು, ಅಂಕಪಟ್ಟಿ ಮತ್ತು ಪ್ರಮಾಣ ಪತ್ರಗಳನ್ನು ಸುರಕ್ಷಿತವಾಗಿ ಮುಚ್ಚಿದ ಲಕೋಟೆಗಳಲ್ಲಿ ಮಂಡಳಿಯ ಶಾಖಾಧಿಕಾರಿಗಳಿಂದ ಪಡೆದು ಸುರಕ್ಷಿತವಾಗಿ ಲ್ಯಾಮಿನೇಷನ್ ಮಾಡಿ ಅವುಗಳನ್ನು ಸಂಬಂಧ ಪಟ್ಟ ಶಾಖಾಧಿಕಾರಿಗಳಿಗೆ ಸುರಕ್ಷಿತವಾಗಿ ಹಿಂದಿರುಗಿಸಿ ದೃಢೀಕರಣವನ್ನು ಕಡ್ಡಾಯವಾಗಿ ಪಡೆದುಕೊಳ್ಳುವುದು, ಯಾವುದೇ ಭದ್ರತಾ ಲೋಪಕ್ಕೆ ಅವಕಾಶ ಇರುವುದಿಲ್ಲ.

11. ಅಂಕಪಟ್ಟಿ/ಪ್ರಮಾಣ ಪತ್ರವನ್ನು ಲ್ಯಾಮಿನೇಷನ್ ಮಾಡುವ ಸಂದರ್ಭದಲ್ಲಿ ಯಾವುದೇ ರೀತಿಯ ಹಾನಿ ಉಂಟಾದಲ್ಲಿ ಸೂಕ್ತ ದಾಖಲೆಗಳೊಂದಿಗೆ ಮರು ಸಲ್ಲಿಸಿ ಬೇರೆ ಅಂಕಪಟ್ಟಿ/ಪ್ರಮಾಣ ಪತ್ರವನ್ನು ಪಡೆದು ಲ್ಯಾಮಿನೇಷನ್ ಮಾಡಿ ನೀಡುವುದು. ಇದಕ್ಕೆ ತಗಲುವ ಯಾವುದೇ ವೆಚ್ಚವನ್ನು ಮಂಡಳಿಯಿಂದ ಭರಿಸುವುದಿಲ್ಲ.

12. ಸದರಿ ದರ ಪಟ್ಟಿಗೆ ನಮೂದಿಸಿದ ದರವು ಕಾರ್ಯಾದೇಶದ ದಿನಾಂಕದಿಂದ 01 ವರ್ಷದವರೆಗೆ ಚಾಲ್ತಿಯಲ್ಲಿರುತ್ತದೆ.

ನಿರ್ದೇಶಕರು

ಇತರೆ ಪರೀಕ್ಷೆಗಳು